ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 11 ಸಂಚಿಕೆ : 2 ಪುಟ : 8 ಡಿಸೆಂಬರ್-ಜನವರಿ 2016-17

ಆತ್ಮೀಯ ಕಾರ್ಮಿಕರೇ,

ದಿನನಿತ್ಯ ಫ್ಯಾಕ್ಟರಿ ಕೆಲಸ, ಮತ್ತು ಮನೆಕೆಲಸದ ಚಕ್ರದಲ್ಲಿ ಸುತ್ತುತ್ತಿರುವ ನಮಗೆ, ನಮ್ಮ ವಿರುದ್ಧ ನಡೆಯುವ ಯಾವ ವಿಚಾರವೂ ಅರಿವಿಗೇ ಬರುವುದಿಲ್ಲ. ನಮಗೇ ಗೊತ್ತಿಲ್ಲದೆ ನಮ್ಮ ವಿರುದ್ಧವಾಗಿ, ಬಂಡವಾಳಶಾಹಿ ಪರವಾಗಿ ಕಾನೂನುಗಳು ತಿದ್ದುಪಡಿಯಾಗುತ್ತವೆ, ಆರ್ಥಿಕ ನೀತಿಗಳು ಬದಲಾಗುತ್ತಿರುತ್ತವೆ. ದೇಶದ ಆರ್ಥಿಕತೆಗೆ ಅತಿ ದೊಡ್ಡ ಕೊಡುಗೆ ನೀಡುತ್ತಿರುವ ನಾವು ನಮ್ಮ ವಿರುದ್ಧದ ಸರ್ಕಾರೀ ನೀತಿಗಳು, ಅವರ ನಿರ್ಧಾರಗಳನ್ನು ಅನಿವಾರ್ಯವಾಗಿ ಪಾಲಿಸುತ್ತಾ ಇನ್ನೂ ಇನ್ನೂ ಕೆಳ ಮಟ್ಟಕ್ಕೇ ಇಳಿಯುತ್ತಿದ್ದೇವೆ.

ಆದರೆ, ಒಂದೊಮ್ಮೆ ನಾವು ಬೀದಿಗಿಳಿದರೆ ನಮ್ಮ ವಿರುದ್ಧ ತಿದ್ದುಪಡಿ ಮಾಡಿದ ಆದೇಶಗಳನ್ನೇ ಹಿಂತೆಗೆದುಕೊಳ್ಳುವಂತೆ ಮಾಡುವ ಶಕ್ತಿ ಇದೆ ಎಂದು ಕಳೆದ ಏಪ್ರಿಲ್‌ನಲ್ಲಿ ನಾವು ತೋರಿಸಿಕೊಟ್ಟಿದ್ದೇವೆ. ಕಾರ್ಮಿಕ ಶಕ್ತಿಯ ಆಕ್ರೋಶಕ್ಕೆ ಆಳುವ ಸರ್ಕಾರಗಳು ಮಣಿಯುತ್ತವೆ ಎಂದು ಸಾಬೀತಾಗಿದೆ. ಇದು ನಮ್ಮ ನೈಜ ಹೋರಾಟಕ್ಕೆ ಸಿಕ್ಕ ಗೆಲುವು ಎಂದು ನಾವೆಲ್ಲರೂ ಮತ್ತಷ್ಟು ಹುರುಪಿನಿಂದ ನಮ್ಮ ಮೇಲಾಗುತ್ತಿರುವ ಇತರ ಅನ್ಯಾಯಗಳ ವಿರುದ್ಧವೂ ಸಹ ಹೋರಾಡುವ ಅಗತ್ಯವಿದೆ.

ಆದರೆ ಇದಕ್ಕೂ ಮುನ್ನ ನಮ್ಮ ಹೋರಾಟ ಯಾರ ವಿರುದ್ಧ ಎಂಬುದನ್ನು ನಾವು ಎಚ್ಚರಿಕೆಯಿಂದ ಅರಿಯಬೇಕಾಗಿದೆ. ಯಾರಿಂದ ನಮ್ಮ ಶೋಷಣೆ ಯಾಗುತ್ತಿದೆ ಎಂದು ಮತ್ತೊಮ್ಮೆ ಮಗದೊಮ್ಮೆ ಪ್ರಶ್ನಿಸಿ ಕೊಳ್ಳಬೇಕಾಗಿದೆ. ಬಡವರನ್ನು ಕಾರ್ಮಿಕರನ್ನು ಲೆಕ್ಕಕ್ಕೇ ಇಡದೆ, ಕೇವಲ ಬಂಡವಾಳಶಾಹಿಗಳನ್ನೇ ಸಲಹುವ ಸರ್ಕಾರದ ನೀತಿಗಳು ನಮ್ಮ ವಿರೋಧಿಗಳು. ನಮ್ಮಿಂದ ಸೃಷ್ಟಿಯಾಗುತ್ತಿರುವ ಅಪಾರ ಸಂಪತ್ತನ್ನು ಹಂಚಿಕೊಳ್ಳುತ್ತಿರುವ ಆದರೆ ನಮ್ಮ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದ ಲಾಭಕೋರ ಅಂತರರಾಷ್ಟ್ರೀಯ ಬ್ರಾಂಡ್‌ಗಳು ಮತ್ತು ನಮ್ಮ ನೆಲದ ಮಾಲೀಕರು ನಮ್ಮ ಮೂಲ ಶೋಷಕರು. ಮನೆ ಮತ್ತು ಕಾರ್ಖಾನೆ ಎರಡೂ ಕಡೆ ಬಿಡುವಿಲ್ಲದೆ ದುಡಿದರೂ ಸಹ ನಮ್ಮನ್ನೇ ದೂರುವ, ನಮ್ಮನ್ನು ಇನ್ನಷ್ಟು ತುಳಿಯುವ, ಹೆಣ್ಣು ಎಂದು ಅವಮಾನಿಸುವ, ತಿರಸ್ಕರಿಸುವ ಸಮಾಜದ ಪಿತೃಪ್ರಧಾನ ವ್ಯವಸ್ಥೆ ಸಹ ನಮ್ಮ ಶೋಷಣೆಗೆ ಕಾರಣ.

ಆದರೆ ವಿಪರ್ಯಾಸವೆಂದರೆ ಇವರು ಯಾರೂ ನೇರವಾಗಿ ಕಣ್ಣೆದುರು ಕಾಣುವುದಿಲ್ಲ. ಮೇಲ್ಮಟ್ಟದಲ್ಲಿ ನಡೆಯುವ ನಮ್ಮ ವಿರುದ್ಧದ ಪಿತೂರಿಯನ್ನು ಅರ್ಥ ಮಾಡಿಕೊಳ್ಳದೆ ನಾವು ಅಜ್ಞಾನಿಗಳಾಗುತ್ತಿದ್ದೇವೆ. ಕೆಲಸದ ಸ್ಥಳದಲ್ಲಿ ನಮ್ಮೊಂದಿಗೆ ನೇರವಾಗಿ ಕೆಲಸ ಮಾಡುವ ಆಡಳಿತ ವರ್ಗದ ಫ್ಲೋರ್ ಇನ್‌ಚಾರ್ಜ್, ಸೂಪರ್‌ವೈಸರ್, ಮ್ಯಾನೇಜರ್‌ಗಳೇ ನಮ್ಮ ವಿರೋಧಿಗಳು, ನಮ್ಮ ಶೋಷಣೆಗೆ ಕಾರಣರು ಎಂದು ನಾವು ಬಲವಾಗಿ ನಂಬಿದ್ದೇವೆ. ಅದು ನಿಜವೇ ಆದರೂ, ಇದರ ಹಿಂದೆ ನಮಗೆ ಅರ್ಥವೇ ಆಗದ ಒಂದು ಲಾಭಕೋರ ಬಂಡವಾಳ ಶಾಹೀ ವ್ಯವಸ್ಥೆ ಇದೆ. ಈ ವ್ಯವಸ್ಥೆಯ ಭಾಗವಾದ ಇವರೆಲ್ಲರೂ ಅದರ ಹಿತಾಶಕ್ತಿಯನ್ನು ಕಾಯಲೇ ಬೇಕಾಗಿದೆ. ಪಿತೃ ಪ್ರಧಾನ ವ್ಯವಸ್ಥೆಯ ವಾರಸುದಾರರಾಗಿ ಈ ಪುರುಷ ಆಡಳಿತವರ್ಗವು ಮಹಿಳಾ ಕಾರ್ಮಿಕರ ಶೋಷಣೆ ನಡೆಸುತ್ತಿರುವುದು ಈ ಇಡೀ ಪ್ರಕ್ರಿಯೆಯ ಒಂದು ಭಾಗ ಅಷ್ಟೇ. ಅದರೆ ಇವರೇ ಅಂತಿಮವಲ್ಲ, ಇದರ ಹಿಂದೆ ಹಾಗೂ ಮುಂದೆ ಇಡೀ ಆರ್ಥಿಕತೆ, ಬಂಡವಾಳಶಾಹೀ ವ್ಯವಸ್ಥೆಯ ಪಿತೂರಿ ಇದೆ.

ನಿಮಗೇ ತಿಳಿದಂತೆ ನಮ್ಮ ಕಾರ್ಖಾನೆಯ ಮಾಲೀಕರು ಅಥವಾ ನಾವು ಹೊಲೆಯುವ ಬ್ರಾಂಡ್‌ನ ಮಾಲೀಕ ಎಂದಾದರೂ ನಮ್ಮೆದುರಿಗೆ ಬಂದು ನಿಂತಿದ್ದಾರೆಯೇ? ನಮ್ಮ ಅಳಲುಗಳನ್ನು ಕೇಳಿದ್ದಾರೆಯೇ?ನಮ್ಮ ಕಾಳಜಿ ವಹಿಸಿದ್ದಾರೆಯೇ? ಅವರಿಗೆ ಬೇಕಾಗಿರುವುದು ಕೇವಲ ಲಾಭ ಮಾತ್ರ, ಅದಕ್ಕೆ ಯಾವುದೇ ಧಕ್ಕೆ ಬರುವಂತಿಲ್ಲ. ನಮ್ಮನ್ನು ಹಿಂಡಿಯಾದರೂ ಸರಿ, ಅವರ ಲಾಭವನ್ನು ಪಡೆಯಲು ಈ ಆಡಳಿತವರ್ಗದವರನ್ನು ನಮ್ಮ ಶೋಷಿಸಲು ಗುತ್ತಿಗೆ ನೀಡಿದ್ದಾರೆ. ಇದು ನಿಜವಾದ ವಾಸ್ತವ. ಪ್ರತಿ ಬಾರಿ ನಮ್ಮ ಮೇಲಿನ ಅನ್ಯಾಯವನ್ನು ನಾವು ವಿರೋಧಿಸಿದಾಗಲೆಲ್ಲ ಈ ಮಧ್ಯವರ್ತಿಗಳನ್ನು ಬದಲಾಯಿ[illegible]ುತ್ತದೆ. ನಮ್ಮ ಹೋರಾಟ ಯಾರೋ ಮ್ಯಾನೇಜರ್ ವಿರುದ್ಧ ಎಂದು ನಂಬಿಸಿ ಮಾಲೀಕರು ಅವನನ್ನು ಬದಲಿಸುತ್ತಾರೆ. ನಾವೂ ಸಹ ಅಷ್ಟಕ್ಕೇ ಸುಮ್ಮನಾಗುತ್ತೇವೆ, ಆದರೆ ಮ್ಯಾನೇಜರ್ ಅಥವಾ ಸೂಪರ್‌ವೈಸರ್ ಬದಲಾದ ತಕ್ಷಣ ನಮ್ಮ ಪರಿಸ್ಥಿತಿ ಬದಲಾಗುತ್ತಿದೆಯೇ?

ಖಂಡಿತಾ ಇಲ್ಲ. ಇಡೀ ವ್ಯವಸ್ಥೆಯೇ ನಮ್ಮ ಶೋಷಣೆಯ ಮೂಲ ವಾಗಿರುವಾಗ, ನಾವು ಅದರ ವಿರುದ್ಧವೇ ವ್ಯವಸ್ಥಿತವಾಗಿ ಹೋರಾಡಬೇಕೇ ಹೊರತು, ಯಾರೋ ಒಬ್ಬ ವ್ಯಕ್ತಿಯ ವಿರುದ್ಧವಾಗಿ ಅಲ್ಲ. ಇದು ನಮ್ಮ ಹೋರಾಟವನ್ನು, ವಿರೋಧವನ್ನು ದುರ್ಬಲ ಗೊಳಿಸುತ್ತಿದೆ ಅಷ್ಟೇ.

ಇಂತಹ ಪರಿಸ್ಥಿತಿಯಲ್ಲಿ ನಾವು ಎಚ್ಚರಿಕೆಯಿಂದ, ಒಗ್ಗಟ್ಟಾಗಿ ವ್ಯವಸ್ಥಿತ ವಾಗಿ ಅರಿವು ಮೂಡಿಸಿಕೊಳ್ಳುವುದು ಅತ್ಯಂತ ಮುಖ್ಯವಾಗುತ್ತದೆ. ❒




Scanned with OKEN Scanner

# ಸೆಪ್ಟೆಂಬರ್ 2, 2016 ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಶ್ರೀರಂಗಪಟ್ಟಣದಲ್ಲಿ



ಬೆಲೆ ಏರಿಕೆ ನಿಯಂತ್ರಿಸಬೇಕಾದ ಕೇಂದ್ರ ಸರ್ಕಾರವು ತನ್ನ ಕರ್ತವ್ಯ ನಿರ್ವಹಿಸದ ಪರಿಣಾಮವಾಗಿ ಬೆಲೆ ಏರಿಕೆಯ ಬಾಧೆಯನ್ನು ತಾಳಲಾಗದೆ ಪರಿತಪಿಸುವಂತಾಗಿದೆ. ಒಂದೆಡೆ ನಿಯಂತ್ರಣವಿಲ್ಲದಂತೆ ಬೆಲೆಗಳು ಏರುತ್ತಿದ್ದರೆ, ಕಾರ್ಮಿಕರ ತುಟ್ಟಿಭತ್ಯೆ ಮಾತ್ರ ಪ್ರತಿವರ್ಷ ಕಡಿಮೆಯಾಗುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಉತ್ಪನ್ನಗಳ ಬೆಲೆಗಳು ತೀವ್ರವಾಗಿ ಕುಸಿದಿದ್ದರೂ ಸಹ ಸರ್ಕಾರದ ತೆರಿಗೆ ನೀತಿಯನ್ನು ರಾಷ್ಟ್ರದಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಬೆಲೆಗಳು ಏರಿಳಿತ ಕಾಣುತ್ತಾ ಎಂದೆಂದೂ ಕಂಡರಿಯದ ಮಟ್ಟಕ್ಕೆ ಹೋಗಿದೆ. ಅಗತ್ಯ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಸಾರ್ವತ್ರಿಕವಾಗಿ ಎಲ್ಲರಿಗೂ ನೀಡುವ ವ್ಯವಸ್ಥೆಯನ್ನು ಕಳಚಿ ಹಾಕಿರುವ ಪರಿಣಾಮ ಬೆಲೆಗಳು ಮತ್ತಷ್ಟು ಏರಿಕೆಯಾಗುತ್ತಿವೆ.

2016 ರ ಏಪ್ರಿಲ್ 18,19 ರಂದು ಬೆಂಗಳೂರಿನಲ್ಲಿ ನಡೆದ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟವು ಕಾರ್ಮಿಕ ವಿರೋಧಿ ಪಿ.ಎಫ್. ಕಾಯ್ದೆ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ವಾಪಸ್ಸು ಪಡೆಯುವಂತೆ ಮಾಡಿತು.ಆದರೆ ಈ ಹೋರಾಟದಲ್ಲಿನ ಗಾರ್ಮೆಂಟ್ಸ್ ಕಾರ್ಮಿಕರ ಮೇಲೆ ದಾಖಲಿಸಿರುವ ಕ್ರಿಮಿನಲ್ ಪ್ರಕರಣಗಳನ್ನು ಸರ್ಕಾರ ವಾಪಸ್ಸು ಪಡೆಯದೆ ಮೀನಮೇಷ ಎಣಿಸುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಮತ್ತು ಜನವಿರೋಧಿ ನೀತಿಗಳನ್ನು ಹಿಮ್ಮೆಟಿಸಲು ಹಲವಾರು ಬೇಡಿಕೆಗಾಗಿ ಕೇಂದ್ರ ಮತ್ತ ರಾಜ್ಯ ಸರ್ಕಾರಿ ನೌಕರರ ಸಂಘಗಳು ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಜಂಟಿಯಾಗಿ 2016 ಸೆಪ್ಟೆಂಬರ್ 2 ರಂದು ಒಂದು ದಿನದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು. ಈ ಮುಷ್ಕರ ಬೆಂಗಳೂರಿನಾದ್ಯಂತ ಹಲವಾರು ಸಂಘಟನೆಗಳು ಸೇರಿ ಯಶಸ್ವಿಯಾಗಿ ನಡೆಸಿದವು ಈ ಮುಷ್ಕರವನ್ನು ಬೆಂಬಲಿಸಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಸುಮಾರು 900 ಜನ ಗಾರ್ಮೆಂಟ್ಸ್ ಕಾರ್ಮಿಕರನ್ನು ಒಗ್ಗೂಡಿಸಿ ಹೋರಾಟವನ್ನು ನಡೆಸುವಲ್ಲಿ ಯಶಸ್ವಿಯಾಯಿತು. ಇಲ್ಲಿ ರ್‍ಯಾಲಿಯು ಶ್ರೀರಂಗಪಟ್ಟಣದ ಬೆಂಗಳೂರು ಮತ್ತು ಮೈಸೂರು ಮುಖ್ಯ ರಸ್ತೆ, ಕೆ.ಎಸ್.ಆರ್.ಟಿ.ಸಿ.ಬಸ್‌ಸ್ಟಾಂಡ್, ಶ್ರೀರಂಗಪಟ್ಟಣದ ಮುಖ್ಯ ರಸ್ತೆ ಮತ್ತು ಮಿನಿ ವಿಧಾನಸೌದದವರೆಗೆ ಬೈಕ್‌ಗಳಲ್ಲಿ ಮತ್ತು ಕಾಲ್ನಡಿಗೆಯಲ್ಲಿ ಕಾರ್ಮಿಕರು ಘೋಷಣೆಗಳನ್ನು ಕೂಗಿಕೊಂಡು ರ್‍ಯಾಲಿ ಸಾಗುವ ಮೂಲಕ ಬಹಿರಂಗ ಸಭೆಯಲ್ಲಿ ಶ್ರೀರಂಗಪಟ್ಟಣದ ತಹಶಿಲ್ದಾರ್‌ರವರಿಗೆ ಮುಷ್ಕರದ 8 ಬೇಡಿಕೆಗಳ ನಿವೇದನಾ ಪತ್ರವನ್ನು ನೀಡಲಾಯಿತು. ಈ ರ್‍ಯಾಲಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು 2 ಕಿ.ಮೀ ದೂರವನ್ನು ಹುಮ್ಮಸ್ಸಿನಿಂದ ನಡೆದು ಬಂದದ್ದು ವಿಶೇಷವಾಗಿತ್ತು. ❐


**ಸೂಜಿ–ದಾರ** ಸಂಪಾದಕ ಮಂಡಳಿ

ಗೌರವ ಸಂಪಾದಕರು : ದು. ಸರಸ್ವತಿ
ಸಂಪಾದಕರು : ಪ್ರತಿಭಾ ಆರ್.
ಸಹಕಾರ : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GATWU ಪದಾಧಿಕಾರಿಗಳು

ಈ ಸಂಚಿಕೆಯನ್ನು ಪ್ರಾಯೋಜಿಸಿದವರು
ಶ್ರೀಮತಿ ಪುಷ್ಪ ಅವರಿಗೆ
ಮಾನಸ ಬಳಗ
ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಹಾಗೂ GAWTU
ಧನ್ಯವಾದಗಳನ್ನು ಅರ್ಪಿಸುತ್ತಿವೆ.




# ಸೆಪ್ಟೆಂಬರ್ 2, 2016 ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಬೆಂಗಳೂರಿನಲ್ಲಿ

**ಕೇ**ಂದ್ರ ಸರ್ಕಾರದ ಜನವಿರೋಧೀ ಕಾರ್ಮಿಕ ನೀತಿಗಳ ವಿರುದ್ಧ ಹೋರಾಟ ನಡೆಸಲು GATWU ಮತ್ತು NTUI ಸೇರಿದಂತೆ, ಕೇಂದ್ರ ಕಾರ್ಮಿಕ ಸಂಘಟನೆಗಳಾದ AITUC, CITU, INTUC, HMS, AIUTUC, AICCTU, TUCC ಮತ್ತು ಕೇಂದ್ರ ರಾಜ್ಯ ಸರ್ಕಾರಿ ನೌಕರರ ಸಂಘಗಳು ಬ್ಯಾಂಕ್ ವಿಮಾ ಮುಂತಾದ ಕೇಂದ್ರ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ಕಾರ್ಮಿಕರನ್ನು ಬೃಹತ್ ರ್‍ಯಾಲಿ ಮತ್ತು ಸಭೆಗೆ ಸೆಪ್ಟೆಂಬರ್ 2ರಂದು ಆಹ್ವಾನಿಸಿತು. ಈ ರಾಷ್ಟ್ರೀಯ ಸಾರ್ವತ್ರಿಕ ಮುಷ್ಕರದಲ್ಲಿ ಪ್ರಮುಖವಾಗಿ ಹನ್ನೆರಡು ಬೇಡಿಕೆಗಳನ್ನು ಒತ್ತಾಯಿಸಿ ಹೋರಾಟ ನಡೆಸಲಾಯಿತು. ಈ ಹೋರಾಟಕ್ಕೆ 50 ಜನ ಗಾರ್ಮೆಂಟ್ಸ್ ಕಾರ್ಮಿಕರೊಂದಿಗೆ GATWUವಿನ ಕಾರ್ಯಕರ್ತರು ಭಾಗವಹಿಸಿದ್ದೆವು. ಘೋಷಣೆಗಳನ್ನು ಕೂಗುತ್ತಾ ಟೌನ್ ಹಾಲ್‌ನಿಂದ 11 ಗಂಟೆಗೆ ರ್‍ಯಾಲಿ ಪ್ರಾರಂಭವಾಗಿ ಬನ್ನಪ್ಪ ಪಾರ್ಕ್ ಮಾರ್ಗ ವಾಗಿ ಫ್ರೀಡಂ ಪಾರ್ಕ್‌ಗೆ ಮಧ್ಯಾಹ್ನ 1.30ಕ್ಕೆ ತಲುಪಿದೆವು.

ಕಳೆದ ಕೆಲವು ವರ್ಷಗಳಿಂದ ಕೇಂದ್ರ ಕಾರ್ಮಿಕ ಸಂಘಟನೆಗಳು ನಡೆಸುತ್ತಿರುವ ದೇಶವ್ಯಾಪಿ ಬಂದ್ ಯಶಸ್ವಿಯಾಗುತ್ತಿದೆ. GATWU 2009ರಿಂದಲೂ ಈ ಬಂದ್‌ನಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ. ಪ್ರಾರಂಭದಲ್ಲಿ ಇದನ್ನು ನಿರ್ಲಕ್ಷಿಸಿದ್ದ ಮಾಲೀಕರು ಈಗ ಆ ದಿನ ಕಾರ್ಖಾನೆಯನ್ನು ಮುಚ್ಚುತ್ತಿವೆ.

## ಪ್ರಮುಖ ಬೇಡಿಕೆಗಳು

* ರೂ 18.000/ ಗಳ ರಾಷ್ಟ್ರ ವ್ಯಾಪಿ ಸಮಾನ ಕನಿಷ್ಟ ವೇತನ
* ಕಾರ್ಮಿಕ ಸಂಘಟನಾ ಸ್ವಾತಂತ್ರ್ಯವನ್ನು ಗೌರವಿಸಬೇಕು.
* ಸಾಮೂಹಿಕ ಚೌಕಾಸಿಯ ಹಕ್ಕು ಮತ್ತು ಕಾರ್ಮಿಕ ಸಂಘದ ಖಡ್ಡಾಯ ಮಾನ್ಯತೆ
* ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಸ್ಥಾಪನೆ ಮತ್ತು ಸಾರ್ವಜನಿಕ ಭವಿಷ್ಯ ನಿಧಿ ಯೋಜನೆ ಜಾರಿಗೊಳಿಸಬೇಕು.
* ಉದ್ಯಮದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರು ಕಿರುಕುಳ ಮುಕ್ತ ಕೆಲಸದ ವಾತಾವರಣದಲ್ಲಿ ಕೆಲಸ ಮಾಡಬೇಕು.
* ಕಾರ್ಮಿಕ ಕಾನೂನುಗಳನ್ನು ಪರಿಣಾಮ ಕಾರಿಯಾಗಿ ಜಾರಿಗೋಳಿಸಬೇಕು.
* ಭೋನಸ್ ಗ್ರ್ಯಾಚುಟಿ ಇ.ಎಸ್.ಐ, ಪಿ.ಎಫ್ ಕಾಯ್ದೆಗಳಲ್ಲಿನ ಪಾವತಿ ಮಿತಿ ರದ್ದುಗೊಳಿಸಬೇಕು.
* ಬಂಡವಾಳ ಶಾಹಿ ಪರ ಕಾರ್ಮಿಕ ಕಾನೂನುಗಳನ್ನು ಯಾವುದು ತಿದ್ದುಪಡಿ ಮಡಬಾರದು.
* ಅಸಮರ್ಪಕ ಹಾಗೂ ದುಬಾರಿ ಸಾರಿಗೆ ವ್ಯವಸ್ಥೆಯಿಂದ ಮಹಿಳಾ ಕಾರ್ಮಿಕರಿಗೆ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸಬೇಕು.

ಕೇಂದ್ರ ಸಂಘಟನೆಗಳು ಇಂದಿನ ಒಂದು ದಿನದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಭಾಗವಹಿಸಿದ್ದು ಹೋರಾಟ ಯಶಸ್ವಿಯಾಗಿದೆ. ❐

### ಕಾರ್ಮಿಕರಲ್ಲಿ ಮನವಿ

ಆತ್ಮೀಯರೇ, ಇದು ನಿಮ್ಮ ಪತ್ರಿಕೆ ನೀವು ಹಣ ನೀಡಿ ಕೊಂಡು ಓದಿದರೇ ಈ ಪತ್ರಿಕೆ ಮುಂದುವರಿಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ದುಡ್ಡುಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.

*–ಸಂ.ಮಂ.*



# ಭರವಸೆಯ ಹಂದರ ಕಟ್ಟಿದ್ದು ಹೀಗೆ ಕಳ್ಳು ಬಳ್ಳಿ ಸಂಬಂಧ ಬೆಳೆಸಿದ್ದು ಹೀಗೆ

**ಮಂಗಳೂರಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಯುವ ಸ್ನೇಹಿತೆಯರಿಗೆ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧೀ ವೇದಿಕೆಯವತಿಯಿಂದ ಎರಡು ದಿನದ ಕಾರ್ಯಾಗಾರವನ್ನು ಕವಲಕ್ಕಿಯಲ್ಲಿ ನಡೆಸಲಾಯಿತು. ಹಲವಾರು ಜಿಲ್ಲೆಗಳಿಂದ ಸುಮಾರು 15 ಮಂದಿ ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಇದರ ಅನುಭವವನ್ನು ಒಕ್ಕೂಟದ ಭಾಗವಾದ ವಾಣಿ ಪೆರಿಯೋಡಿಯವರು ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ.**

'ಸಿದ್ಧಾಂತಗಳನ್ನು ನಮ್ಮೊಳಗೆ ಕೊರೆಯುವುದಲ್ಲ, ಬಾಂಧವ್ಯ ಬೆಳೆಸಿಕೊಳ್ಳುವುದೇ ನಮ್ಮ ಸಿದ್ಧಾಂತ. ಕಳ್ಳು ಬಳ್ಳಿ ಸಂಬಂಧ ಕಟ್ಟೋದೇ ಇದರ ಉದ್ದೇಶ" – ಶಿಬಿರದ ಮೊದಲ ನುಡಿಗಳೇ ಇವು.

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಅವಲೋಕನ ಮಂಗಳೂರಿನಲ್ಲಿ ನಡೆದಾಗ ಒಂದು ನಿರ್ಣಯ ತೆಗೆದುಕೊಳ್ಳಲಾಗಿತ್ತು. ನಮ್ಮ ಗುಂಪಿನ ಯುವ ಸ್ನೇಹಿತೆ ಯರಿಗೆ, ನಮ್ಮ ಮಹಿಳಾ ಚಳುವಳೀ ನಡೆದು ಬಂದ ದಾರಿ ಅರ್ಥವಾಗ ಬೇಕು. ಈ ಕಾಲಕ್ಕೆ ತಕ್ಕಂತೆ ಚಳವಳಿಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಅವರೂ ಸಕ್ರಿಯ ಪಾತ್ರ ವಹಿಸುವಂತಾಗಬೇಕು. ಅದಕ್ಕಾಗಿ ಶಿಬಿರ ನಡೆಸುವ ಜವಾಬ್ದಾರಿ ದು.ಸರಸ್ವತಿ ವಹಿಸಿಕೊಂಡರು, ಅಂತಯೇ ಆಗಸ್ಟ್ 13, 14, 15 ರಂದು ಕವಲಕ್ಕಿಯಲ್ಲಿ ಅನುಪಮಾ ಮನೆಯಲ್ಲಿ ಇಂತಹ ಒಂದು ಶಿಬಿರ ನಡೆಯಿತು. ಮಂಗಳೂರು, ಮೈಸೂರು, ಬಿಜಾಪುರ, ಹೊಸಪೇಟೆ, ಕೊಪ್ಪಳ, ಬೆಂಗಳೂರಿನಿಂದ ಸುಮಾರು 15 ಜನ ಈ ಶಿಬಿರದಲ್ಲಿ ಭಾಗವಹಿಸಿದ್ದರು.

ಜೈಲೊಳಗಿನ ಸಹೋದರಿಯರು ತಯಾರಿಸಿದ ಊದುಬತ್ತಿ ಹಚ್ಚುವುದರ ಮೂಲಕ ಪ್ರತಿದಿನವನ್ನು ಶುರುಮಾಡುತ್ತಿದ್ದೆವು. ಮೊದಲ ದಿನ ಅನುಪಮಾ, ಮಹಾಶ್ವೇತಾ ದೇವಿಯ ನೆನಹಿನೊಂದಿಗೆ ಅವರ ಒಂದು ಆದಿವಾಸಿ ಬದುಕಿನ ಕತೆಯೊಂದಿಗೆ ಶಿಬಿರಕ್ಕೆ ಸೊಗಸಾದ ಚಾಲನೆ ನೀಡಿದರು.

ನಮ್ಮೆಲ್ಲರ ವಿವರವದ ಪರಿಚಯವೇ ಶಿಬಿರದ ಒಂದು ಆಪ್ತ ಭಾಗವಾಗಿತ್ತು. ಪ್ರತಿಯೊಬ್ಬರ ಹಿಂದೆ ಒಂದು ಹೋರಾಟದ ಕತೆ ಇತ್ತು. ಎಲ್ಲಾ ಸಂಘರ್ಷಗಳ ನಡುವೆ ಭರವಸೆಯ ಒಂದು ಹಾಡಿತ್ತು. ಪರಸ್ಪರ ಕೇಳಿಸಿಕೊಳ್ಳುವುದೇ ಖುಶಿಕೊಟ್ಟಿತ್ತು. ಎಲ್ಲರ ಶಕ್ತಿಗಳು ಜೊತೆ ಸೇರಿ ಪರಸ್ಪರ ಪ್ರೇರಣೆಯ ಒಂದು ಹಂದರ ಹೆಣೆದಂತೆ ಆಗಿತ್ತು.

ಸರಸ್ವತಿ ಮಹಿಳಾ ಚಳವಳಿಯ ಸೈದ್ಧಾಂತಿಕ ತಳಹದಿ ಬಗ್ಗೆ ವಿವರ ನೀಡಿದರು. ಒಂದು ಚೌಕಟ್ಟು ಹಾಕಿ ಅದರೊಳಗೆ ಅನುಭವಗಳನ್ನು ಹೊಂದಿಸುವುದು ಒಂದು ರೀತಿ – ಇದು ಬೋಂಡಾದಂತೆ, ಅನುಭವಗಳನ್ನು ತೆಕ್ಕೆಗೆ ಹಾಕಿಕೊಳ್ಳುತ್ತಾ ಅದರಿಂದ ಸಿದ್ಧಾಂತಗಳನ್ನು ರೂಪಿಸಿಕೊಳ್ಳುವುದು ಇನ್ನೊಂದು ರೀತಿ – ಇದು ಪಕೋಡಾದ ಹಾಗೆ ಬೇರೆ ಬೇರೆ ರೂಪ ಪಡೆದುಕೊಳ್ಳುತ್ತದೆ. ಒಂದಂತೂ ನಿಜ, ಆಯಾಯ ಕಾಲಗಟ್ಟದ ದರ್ದಿಂದ ಚಳವಳಿ ಹುಟ್ಟಿಕೊಳ್ಳುತ್ತದೆ.

ಲಿಂಗತ್ವ ಮತ್ತು ಲೈಂಗಿಕತೆಯ ರಾಜಕೀಯ, ಧರ್ಮ, ಅಧಿಕಾರ– ರಾಜಕೀಯ ಪ್ರಾತಿನಿಧ್ಯ, ಸಾಮಾಜಿಕ ನ್ಯಾಯ, ಅಭಿವೃದ್ಧಿಯ –ಈ ಐದು ಆಯಾಮಗಳಲ್ಲಿ ಮಹಿಳಾ ಚಳುವಳಿಯ ಸಿದ್ಧಾಂತವನ್ನು ವಿವರಿಸಿದರು. ಮಹಿಳೆಯರ ಇಶ್ಯೂಗಳು ಕಾಲಕಾಲಕ್ಕೆ ಹೇಗೆ ತೆರೆದುಕೊಳ್ಳುತ್ತಾ ಬಂತು – ಆರೋಗ್ಯ, ಉದ್ಯೋಗ, ಶಿಕ್ಷಣದಿಂದ ಹಿಡಿದು ಅತ್ಯಾಚಾರ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ಪ್ರವೃತ್ತಿ, ಪರಿಸರದ ಪ್ರಶ್ನೆಗಳು, ಮೀಸಲಾತಿ, ಜಾತಿಯೊಳಗಣ ಅಗತ್ಯಗಳು, ಅಣ್ವಸ್ತ್ರದ ದುರಂತ – ಪ್ರತಿಯೊಂದು ಮಹಿಳೆಯರ ನೋಟದಿಂದ ನೋಡುತ್ತಾ ಹೋರಾಟ ಬೆಳೆದ ರೀತಿಯ ಚಿತ್ರಣ ಸಿಕ್ಕಿತು.

ವಿಮೋಚನಾದಲ್ಲಿ ದೀರ್ಘ ಕಾಲ ಕೆಲಸ ಮಾಡಿದ ಮಧು ಅವರು ಕೌಟುಂಬಿಕ ದೌರ್ಜನ್ಯದ ಕುರಿತು ಕೆಲಸ ಮಾಡುವಾಗ ಅನುಭವಿಸಿದ ಸವಾಲುಗಳು, ಕಲಿಕೆಗಳು, ಬದಲಾದ ಕಾರ್ಯತಂತ್ರಗಳ ಬಗ್ಗೆ ವಿವರವಾದ ಮಾಹಿತಿ ನೀಡಿದರು. ಮೊದಮೊದಲು ಕೌಟುಂಬಿಕ ದೌರ್ಜನ್ಯ ಕೇಸುಗಳನ್ನು ಎತ್ತಿಕೊಳ್ಳುವುದೇ ಮಹಾ ಕಠಿಣವಾಗಿತ್ತು, ಅದನ್ನು ಒಂದು ಇಶ್ಯೂ ಆಗಿಯೇ ನೋಡುತ್ತಿರಲಿಲ್ಲ. ಕ್ರಮೇಣ ಸ್ಥಳೀಯದಿಂದ ಹಿಡಿದು ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಹೋರಾಟಗಳು ಬೆಳೆದು ಬಂದ ರೀತಿ – ಕಪ್ಪು ಉಡುಗೆಯಲ್ಲಿ ಮಹಿಳೆಯರು, ಮಹಿಳಾ ನ್ಯಾಯಾಲಯದ ಪ್ರಕ್ರಿಯೆಗಳನ್ನು ವಿವರಿಸಿದರು.

ಎನ್. ಗಾಯತ್ರಿಯವರು ಮಾರ್ಕ್ಸ್‌ವಾದಿ ಸ್ತ್ರೀವಾದದ ಅನುಭವ ಮುಂದಿಟ್ಟರು. ವಿಶ್ವ ಮಹಿಳಾ ದಿನ ರೂಪುಗೊಂಡ ಬಗೆಯಿಂದ ಹಿಡಿದು, ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರ ಪಾತ್ರ, ವಿವಿಧ ರೀತಿಯ ಮಹಿಳಾ ಒಕ್ಕೂಟಗಳ, ಸಮಿತಿಗಳ ರಚನೆ ಮತ್ತು ಕೆಲಸಗಳ ಬಗ್ಗೆ ವಿವರಿಸಿದರು. ಇವೆಲ್ಲದರ ಜೊತೆಗೆ ನಾವು ಚಿತ್ರಗಳ ಮೂಲಕ ಮಹಿಳಾ ಚಿಂತನೆಯ ನಮ್ಮ ನಮ್ಮ ನೋಟವನ್ನು ವ್ಯಕ್ತಪಡಿಸಿದೆವು. ಇದು ಒಂದು ಹೊಸ ಅನುಭವ. ವಾಣಿಯವರು ಬಾಕಿ ಇತಿಹಾಸ ಎಂಬ ಮಹಿಳಾ ಸಶಕ್ತತೆಯ ಸೂಕ್ಷ್ಮ ಪ್ರತೀಕಗಳನ್ನು ಮುಂದಿಡುವ ನಾಟಕ ಮಾಡಿದರು. ಶಿರ್ಸಿಯ ಆಸುಪಾಸಿನ ಕರಿಕನಮ್ಮ ದೇವಾಲಯ, ಮಿರ್ಜಾನ್ ಕೋಟೆ, ಅಪ್ಸರಕೊಂಡ ಸುತ್ತಾಡಿ ಬಂದೆವು.

ನಮ್ಮ ಒಕ್ಕೂಟದ ಬಗ್ಗೆ ಮತ್ತಷ್ಟು ಮಾತಾಡಿಕೊಂಡು ಪರಿಕಲ್ಪನೆಯನ್ನು ಹರಿತಮಾಡಿಕೊಂಡೆವು. ಮನಸಾರೆ ಮಾತಾಡಿ, ಮನಸಾರೆ ಕೇಳಿಸಿಕೊಂಡು, ಮನಸಾರೆ ಉಂಡು, ಮನಸಾರೆ ಪ್ರೀತಿ ಹಂಚಿಕೊಂಡು ಮತ್ತಷ್ಟು ಹಂಚಲು ಮರಳಿದೆವು.

**ವಾಣಿ ಪೆರಿಯೋಡಿ**



Scanned with OKEN Scanner

# NTUI ಜನರಲ್ ಕೌನ್ಸಿಲ್

NTUIನೊಂದಿಗೆ ಇರುವ ಎಲ್ಲಾ ಸಂಘಟನೆಗಳೊಂದಿಗೆ GATWU ಕಾರ್ಯಕರ್ತರು ಜಾರ್ಖಂಡ್‌ನ ಜಮ್‌ಶೆಡ್ ಪುರದಲ್ಲಿ ನಡೆದ 4ನೇ NTUI ಜನರಲ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರು. ಮೂರು ದಿನದ ಈ ಮೀಟಿಂಗ್‌ನಲ್ಲಿ ಹಲವಾರು ವಿಷಯಗಳು ಚರ್ಚೆಯಾದವು. ಇದರಲ್ಲಿ ದಿನಾಂಕ: 18 ಮತ್ತು 19ರ ಏಪ್ರಿಲ್ 2016ರಲ್ಲಿ ಪಿ.ಎಫ್. ಪ್ರತಿಭಟನೆಯ ಬಗ್ಗೆ ಮತ್ತು ಪ್ರತಿಭಟನೆಯಲ್ಲಿ ಬಂಧಿತರಾದ ಕಾರ್ಮಿಕರ ಬಗ್ಗೆ ನಮ್ಮ ಕಾರ್ಯಕರ್ತರು ಮಾತನಾಡಿದರು. ಬೆಂಗಳೂರಿನಲ್ಲಿ ನಡೆದ ಗಾರ್ಮೆಂಟ್ಸ್ ಕಾರ್ಮಿಕರ ಈ ಹೋರಾಟವು ಕಾರ್ಮಿಕ ವಿರೋಧಿ ಪಿ.ಎಫ್. ಕಾಯ್ದೆ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ವಾಪಸ್ಸು ಪಡೆಯುವಂತೆ ಮಾಡಿತು. ಈ ಹೋರಾಟದಲ್ಲಿ ಬಂಧಿತರಾದ ಗಾರ್ಮೆಂಟ್ಸ್ ಕಾರ್ಮಿಕರ ಮೇಲೆ ಹಾಕಿರುವ ಪ್ರಕರಣಗಳನ್ನು ಇಂದಿಗೂ ಸರ್ಕಾರ ವಾಪಸ್ಸು ಪಡೆಯದೆ ಮೀನಮೇಷ ಎಣಿಸುತ್ತಿದೆ. ಜೆಮ್‌ಶೆಡ್ಪುರದ ಸ್ಥಳೀಯ ಸಂಘಟನೆಗಳು ಪ್ರಸ್ತುತವಿರುವ ಭೂ ಮಾಫಿಯಾದ ಬಗ್ಗೆ ಹೇಳಿದರು ಮೂರು ರಾಜ್ಯಗಳ ಒಂದೊಂದು ಗುಂಪಿನಲ್ಲಿ ಗಾರ್ಮೆಂಟ್ ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಲಾಯಿತು. ಈ ಗುಂಪು ಚರ್ಚೆಯಲ್ಲಿ NTUI ಅಧ್ಯಕ್ಷರು, ಆದ ವಾಸುದೇವನ್‌ರವರು ಯೂನಿಯನ್‌ನ ಮಹತ್ವವನ್ನು ವಿವರಿಸಿದರು. ಹಣದ ಆಸೆ ಇಲ್ಲದೆ ನಿಸ್ವಾರ್ಥ ಸೇವೆ ಸಲ್ಲಿಸಬೇಕು ಮತ್ತು ಮುಂದಿನ ಜನ್ಮದಲ್ಲೂ ಇದೇ ಯೂನಿಯನ್‌ನಲ್ಲಿ ಸೇವೆ ಸಲ್ಲಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿರಬೇಕು. ಮುಂದೆ ಎಲ್ಲಾ ಸಂಘಟನೆಯೊಂದಿಗೂ ನಾವೂ ಸದಾ ಇರುತ್ತೇವೆ. ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಹೋರಾಡಲು ಎಲ್ಲ ಸಂಘಟನೆಯವರು ನಮ್ಮೊಂದಿಗೆ ಕೈ ಜೋಡಿಸಿ ಎಂದು ಹೇಳಿದರು. ಮೂರು ದಿನದ ಸಮಾವೇಶದಲ್ಲಿ ಕೊನೆಯ ದಿನ ಮಧ್ಯಾಹ್ನ 3.00 ಗಂಟೆಗೆ ರ್‍ಯಾಲಿ ಹೊರಟು ಸಂಜೆ 5.30ಕ್ಕೆ ಬಹಿರಂಗ ಸಭೆಯಲ್ಲಿ ಭಾಗವಹಿಸಿದರು. ಈ ಸಭೆಗೆ ಆಗಮಿಸಿದ್ದ ಭೂ ಹಕ್ಕು ಸಂಘಟನೆ ಹೋರಾಟಗಾರ್ತಿ ರೋಮಾ, NTUI ಅಧ್ಯಕ್ಷರು, ವಾಸುದೇವನ್ ರವರು ಮತ್ತು NTUI. ಪ್ರಧಾನ ಕಾರ್ಯದರ್ಶಿ, ಗೌತಮ್ ಮೋದಿ ಯವರು ಜಾರ್ಖಂಡ್‌ನಲ್ಲಿರುವ ಕಾರ್ಮಿಕರ ಬಗ್ಗೆ ಮಾತನಾಡಿದರು ಹಾಗೂ ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಲಾಯಿತು. ▢



# ಕಲ್ಕತ್ತದಲ್ಲೂ ಪ್ರತಿಧ್ವನಿಸಿದ ಗಾರ್ಮೆಂಟ್ಸ್ ಕಾರ್ಮಿಕರ ಪ್ರತಿಭಟನೆ

ಏಪ್ರಿಲ್ 18 .19 ರಂದು ನಡೆದ ಗಾರ್ಮೆಟ್ಸ್ ಕಾರ್ಮಿಕರ ಬೃಹತ್ ಪ್ರತಿಭಟನೆ ನಡೆದಿದ್ದು ಇಡೀ ದೇಶದ ಗಮನವನ್ನೇ ಸೆಳೆದಿತ್ತು ಅದರಲ್ಲೂ ಲಕ್ಷಾಂತರ ಮಹಿಳೆಯರು ಬೀದಿಗಿಳಿದು ಕೇಂದ್ರ ಸರ್ಕಾರವನ್ನು ಮಣಿಸಿದ್ದು ಅತ್ಯಂತ ಪ್ರಾಮುಖ್ಯತೆ ಪಡೆದುಕೊಂಡಿತು.

ಈ ಹಿನ್ನೆಲೆಯಲ್ಲಿ ಕಲ್ಕತ್ತಾದ "ಪೀಪಲ್ ಫಿಲ್ಮ್ ಸೊಸೈಟಿ" ಸಂಘಟನೆಯು, ಅಲ್ಲಿನ ಸ್ಥಳೀಯರಿಗೆ ಈ ಬಗ್ಗೆ ಅರಿವು ಮೂಡಿಸಲು, ದಿನಾಂಕ: 24.6.2016ರಂದು ಕಾರ್ಯಕ್ರಮವೊಂದನ್ನು ಹಮ್ಮಿ ಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಭಾಗವಹಿಲಸಲು "ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ" ಹಾಗೂ GATWU ಕಾರ್ಯಕರ್ತರಿಗೆ ಆಹ್ವಾನ ನೀಡಿತ್ತು. ಅದರಂತೆ ಮದೀನಾತಾಜ್ ಅವರು ಭಾಗವಹಿಸಿ, ಕಾರ್ಯಕ್ರಮದಲ್ಲಿ ಮಾತನಾಡಿದರು.

ಸುಮಾರು 100 ರಿಂದ 150 ಮಂದಿ ಕೊಲ್ಕತ್ತಾದ ನಾಗರೀಕರು, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರಿಗೆ ಇದ್ದ ಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡರು.

ನಂತರ ಅವರು ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟಕ್ಕೆ ತಮ್ಮದೂ ಬೆಂಬಲ ಇದೆ ಎಂದು ಹೇಳಿ, ಯಾವುದೇ ಸಹಾಯ ಮಾಡಲು ತಾವು ಸಿದ್ಧ ಎಂದು ಹೇಳಿದರು. ▢

# ನೋಟು ರದ್ದತಿಯ ಬಗ್ಗೆ ಕಾರ್ಮಿಕರ ಪ್ರತಿಕ್ರಿಯೆ

ಕೇಂದ್ರ ಸರ್ಕಾರವು 500 ಹಾಗೂ 1000ದ ನೋಟುಗಳನ್ನು ರದ್ದುಗೊಳಿಸಿ 50 ದಿನಗಳಾದವು. ಈ ಕ್ರಮದಿಂದ ಬಡಜನತೆಯು ಹೆಚ್ಚು ತೊಂದರೆಗೊಳ ಗಾಗುವಂತಾಯಿತು. ಈ ಬಗ್ಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಅನುಭವವೇನು?

**ಹೊನ್ನಮ್ಮ, ಟೈಲರ್ ಅರವಿಂದ್ ಲಿಮಿಟೆಡ್** : "ನನ್ನ ಗಂಡನಿಗೆ ಜ್ವರ ಬಂದು ಹತ್ತು ದಿನಗಳಾಯಿತು ಆಸ್ಪತ್ರೆ ಹೋಗಲು, ಔಷಧ ತರಲು ಹಣವಿಲ್ಲ. ಹಳೆಯನೋಟನ್ನು ಕೊಟ್ಟರೆ "ಹೊಸ ನೋಟುಬೇಕು ಇಲ್ಲದಿದ್ದರೆ ಪೂರ್ತಿ 500 ರೂ. ಔಷಧಿ ಪಡೆದುಕೊಳ್ಳಿ ಇಲ್ಲದಿದ್ದರೆ ಇಲ್ಲ" ಎಂದು ಅಂಗಡಿಯವರು ಹೇಳಿದ."

**ಶಶಿಕಲಾ, ಟೈಲರ್** : "ಕರೆಂಟ್ ಬಿಲ್ ಕಟ್ಟಿಲ್ಲ ಎಂದು ಕಟ್‌ಮಾಡಿಕೊಂಡು ಹೋಗಿದ್ದರು. ಆದ್ದರಿಂದ 500 ರೂ. ನೋಟು ತೆಗೆದುಕೊಂಡು ಸಾಲಿನಲ್ಲಿ ಅರ್ಧ ಗಂಟೆ ನಿಂತು ಹೋದರೆ ಅಲ್ಲಿ ಬಿಲ್ 240ರೂ. ಇದ್ದರೆ 500 ರೂ. ನೋಟು ಪೂರ್ತಿಯನ್ನು ಕೊಟ್ಟು ಹೋಗಿ ಮುಂದಿನ ತಿಂಗಳು ವಜಾ ಮಾಡಿಕೊಳ್ಳುತ್ತೇವೆ ಎನ್ನುತ್ತಾರೆ. ನಮಗೆ ದಿನದ ಖರ್ಚಿಗೂ ಇಲ್ಲದೆ ಹಳೆಯ 500 ರೂ. ಪೂರ್ತಿಯನ್ನು ಕೊಡಲು ಆಗದೆ ಬಿಲ್ ಕಟ್ಟಲು ಸಾಧ್ಯವಾಗದೆ ತೊಂದರೆ ಅನುಭವಿಸಬೇಕಾಯಿತು."

**ಮಾಯಮ್ಮ ಟೈಲರ್** : "ಅನುವರ್ತ ಅಪಾರೆಲ್ಸ್ ಸಂಬಳ ಬಂತು ಎ ಟಿ ಎಮ್ ಗೂ ಹಾಕಿದರು. ಆದರೆ ಅದನ್ನು ತೆಗೆಯಲು ಒಂದು ದಿನ ರಜೆ ಹಾಕಿ ಎ ಟಿ ಎಮ್ ಮುಂದೆ ಹತ್ತು ಗಂಟೆಗೆ ಸಾಲಿನಲ್ಲಿ ಹೋಗುವುದರೊಳಗೆ ಹಣ ಖಾಲಿಯಾಗಿರುತ್ತೆ, ಮರು ದಿನವೂ ಕೆಲಸ ಬಿಟ್ಟು ಹೋಗಲು ಸಾಧ್ಯವಾಗದೆ ತುಂಬಾ ತೊಂದರೆ ಅನುಭವಿಸಬೇಕಾಯಿತು."

**ಜಯಮ್ಮ ಟೈಲರ್** : "ನೋಟಿನ ಸಮಸ್ಯೆಯಾದಾಗಿನಿಂದ ಕಾರ್ಮಿಕರು ರಜೆ ಹಾಕುವುದು ಜಾಸ್ತಿಯಾಯಿತು. ಆದ್ದರಿಂದ ಕಾರ್ಖಾನೆಯವರು ಬುಧವಾರ ರಜೆ ಕೊಟ್ಟಿದ್ದರು. ನೋಟಿನ ಬದಲಾವಣೆ ಮಾಡಲು ಒಂದು ದಿನವೆಲ್ಲಾ ಆಗುವುದರಿಂದ ಕೆಲಸದ ದಿನದಲ್ಲಿ ಹಣವನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿದ್ದಾರೆ." ▢



Scanned with OKEN Scanner

# ಸುದ್ದಿ ಚಿತ್ರ

ಜರ್ಮನಿಯ Ver.di ಯ ರಿಟೈಲ್ ವರ್ಕರ್ಸ್ ಯೂನಿಯನ್ ಕಾರ್ಯಕರ್ತರೊಂದಿಗೆ GATWUವಿನ ಕಾರ್ಯಕರ್ತರು






ನಾಯಕತ್ವ ವಿಕಸನ ಶಿಬಿರದಲ್ಲಿ ಭಾಗವಹಿಸಿದ್ದ ಕಾರ್ಮಿಕರು









## ವಿದ್ಯಾರ್ಥಿ ವೇತನದ ಬಗ್ಗೆ ಕಾರ್ಮಿಕರ ಅನಿಸಿಕೆ

ನಮಸ್ತೆ ನನ್ನ ಹೆಸರು ಭಾರತಿ ಅನುವರ್ತ ಆಪರೆಲ್ಸ್ ಕಂಪನಿಯಲ್ಲಿ ಸುಮಾರು 5 ವರ್ಷಗಳಿಂದ ಟೈಲರ್ ಆಗಿ ಕೆಲಸ ಮಾಡುತಿದ್ದೆನೆ. ಜೊತೆಗೆ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಸಂಘಟನೆಯಲ್ಲಿ 3 ವರ್ಷಗಳಿಂದ ಸದಸ್ಯಳಾಗಿದ್ದೇನೆ. ನನ್ನ ಮಗ ಇಂಜಿನಿಯರಿಂಗ್ ಓದುತ್ತಿದ್ದಾನೆ. ಕಾರ್ಮಿಕ ಕಲ್ಯಾಣ ಇಲಾಖೆಯಿಂದ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಕೊಡುವ ಬಗ್ಗೆ ನನಗೆ ತಿಳಿಸಿಕೊಟ್ಟಿದ್ದು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಮೂರುವರ್ಷದಿಂದ 3000ದಿಂದ 5000ದ ವರೆಗೆ ನನ್ನ ಮಗನಿಗೆ ವಿದ್ಯಾರ್ಥಿವೇತನ ಸಿಕ್ಕಿದೆ. ಕಾರ್ಮಿಕರ ಪರವಾಗಿರುವ ಸಂಘಟನೆಯಿಂದ ಇವೆಲ್ಲ ಸಾಧ್ಯವಾಯಿತು.



Scanned with OKEN Scanner

# ಕಾರ್ಮಿಕ ಕಾನೂನುಗಳು

- ಕಾರ್ಮಿಕರಿಗೆ ಉದ್ಯೋಗ ನೇಮಕಾತಿ ಪತ್ರವನ್ನು ನೀಡಬೇಕು.
- 240 ದಿನ ಕೆಲಸ ಮಾಡಿದ ಕಾರ್ಮಿಕರನ್ನು ಲಿಖಿತ ಕಾರಣ ನೀಡದೆ, ಕೆಲಸದಿಂದ ತೆಗೆಯುವಂತಿಲ್ಲ
- ಕಾರ್ಮಿಕರು ಈ ಕ್ರಮವನ್ನು ಕಾರ್ಮಿಕ ನ್ಯಾಯಾಲಯದಲ್ಲಿ/ ಇಲಾಖೆಯಲ್ಲಿ ಪ್ರಶ್ನಿಸಬಹುದು.
- ಕೆಲಸದ ಸ್ಥಳದ ಸಮಿತಿಗಳನ್ನು ರಚಿಸಬೇಕು (ಕುಂದು ಕೊರತೆಗಳ ಸಮಿತಿ, ಕ್ಯಾಂಟಿನ್ ಸಮಿತಿ, ಲೈಂಗಿಕ ಕಿರುಕುಳ ವಿರೋಧೀ ಸಮಿತಿ)
- ಕಾರ್ಖಾನೆಗಳನ್ನು ಮುಚ್ಚುವ ಸಂದರ್ಭದಲ್ಲಿ ಕಾರ್ಮಿಕರಿಗೆ ಪರಿಹಾರ ನೀಡಬೇಕು.
- ಸಾಮೂಹಿಕ ರಾಜೀನಾಮೆ ಪಡೆದ ಸಂದರ್ಭದಲ್ಲಿ ಪರಿಹಾರ ನೀಡಬೇಕು.
- ಕಿ.ಮೀ.ಗಿಂತ ದೂರಕ್ಕೆ ಕಾರ್ಖಾನೆ ಸ್ಥಳಾಂತರವಾದಾಗ ವಾಹನ ಸೌಲಭ್ಯ ಅಥವಾ ಸಾರಿಗೆ ವೆಚ್ಚ ನೀಡಬೇಕು.
- ಸರ್ಕಾರ ಕಾಲಕಾಲಕ್ಕೆ ನಿಗದಿಪಡಿಸುವ ಕನಿಷ್ಠ ವೇತನವನ್ನು ನೀಡಬೇಕು. ತಪ್ಪಿದಲ್ಲಿ ಕ್ರಿಮಿನಲ್ ಕೇಸ್ ದಾಖಲಿಸ ಬಹುದು ಮತ್ತು 10 ಪಟ್ಟು ದಂಡ ವಿಧಿಸಬಹುದು.
- ಗರ್ಭಿಣಿ ಮಹಿಳಾ ಕಾರ್ಮಿಕರಿಗೆ 3 ತಿಂಗಳ ವೇತನ ಸಹಿತ ರಜೆ ನೀಡಬೇಕು. ಅವಶ್ಯವಿದ್ದಲ್ಲಿ 1 ತಿಂಗಳ ವೇತನ ರಹಿತ ರಜೆ ನೀಡಬೇಕು.
- ಇ.ಎಸ್.ಐ. ಇರುವವರಿಗೆ ಇದು ಅನ್ವಯವಾಗುವುದಿಲ್ಲ.
- ವಾರ್ಷಿಕ ವೇತನದಲ್ಲಿ ಕನಿಷ್ಠ 8.33% ಗರಿಷ್ಠ 20% ಬೋನಸ್ ನೀಡಬೇಕು.
- ಬೋನಸ್ ಲೆಕ್ಕ ಹಾಕುವುದು ಏಪ್ರಿಲ್ 1ರಿಂದ ಮಾರ್ಚ್ 31ರ ವರೆಗೆ ಪ್ರತಿವರ್ಷ ನವೆಂಬರ್ ಒಳಗೆ ಬೋನಸ್‌ಅನ್ನು ಪಾವತಿಸಬೇಕು
- 30 ದಿನ ಕೆಲಸ ಮಾಡಿದ ಕಾರ್ಮಿಕರು ಕೆಲಸ ಬಿಟ್ಟಿದ್ದರೂ ಅವರಿಗೆ ಬೋನಸ್ ಅನ್ನು ಪಾವತಿಸಬೇಕು.

❑

## ಇನ್ನು ಮುಂದೆ ರೂ. 21,000 ವೇತನ ಪಡೆಯುವವರಿಗೂ ಇ.ಎಸ್.ಐ ಸೌಲಭ್ಯ

ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು, ಕಾರ್ಮಿಕ ರಾಜ್ಯ ವಿಮಾ ನಿಗಮ ಯೋಜನೆಗೆ (ESI) ತಿದ್ದುಪಡಿ ಮಾಡಿ, ಡಿಸೆಂಬರ್ 22 ರಂದು ಆದೇಶ ಹೊರಡಿಸಿದೆ. ಇಲ್ಲಿಯವರೆಗೂ ಇ.ಎಸ್.ಐ ಸೌಲಭ್ಯ ಪಡೆಯಲು ವೇತನದ ಮಿತಿ ರೂ. 15,000 ಇತ್ತು. ಆದರೆ ಈಗ ತಿದ್ದುಪಡಿಯಾದ ಆದೇಶದ ಪ್ರಕಾರ, 2017 ಜನವರಿ, 1 ರಿಂದ ಈ ಮಿತಿಯು, ರೂ. 21,000 ಕ್ಕೆ ಏರಿಕೆಯಾಗಿದೆ.

ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಸಿಗುವುದು ತಿಂಗಳಿಗೆ ರೂ. 7,500 ಮಾತ್ರ, ಆದರೂ ಇ.ಎಸ್.ಐ ಸೌಲಭ್ಯ ಪಡೆಯಲು ವೇತನದ ಮಿತಿಯನ್ನು ಏರಿಸಿರುವುದು ಒಳ್ಳೆಯ ಬೆಳವಣಿಗೆ. ಇದರೊಂದಿಗೆ ಈ ಯೋಜನೆಯ ವೈದ್ಯಕೀಯ ಸೌಲಭ್ಯದ ಗುಣಮಟ್ಟವನ್ನೂ ಸಹ ಉತ್ತಮಗೊಳಿಸುವುದು ಅತ್ಯವಶ್ಯವಾಗಿದೆ.

ಸರ್ಕಾರದ ಈ ತಿದ್ದುಪಡಿಯನ್ನು ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ ಮತ್ತು GATWU ಸ್ವಾಗತಿಸುತ್ತದೆ.

## ಕಾರ್ಮಿಕರೆಲ್ಲಾ ನಮ್ಮವರೇ

**ನಾ**ನು ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅಲ್ಲಿನ ಕೆಲಸದ ವಾತಾವಣದ ಬಗ್ಗೆ ಹಾಗೂ ಆಡಳಿತ ವರ್ಗದವರಿಂದ ಕಾರ್ಮಿಕರ ಮೇಲಾಗುವ ದೌರ್ಜನ್ಯ ಇಷ್ಟು ನನಗೆ ತಿಳಿದಿತ್ತು. ಪೌರಕಾರ್ಮಿಕರ ಬಗ್ಗೆ ಅಷ್ಟೇನು ಗೊತ್ತಿರಲಿಲ್ಲ ಬರ್ತಾರೆ ಕಸ ಹಾಕಿಸಿಕೊಂಡು ಹೊಗ್ತಾರೆ ಅಂತ ಅಂದುಕೊಂಡಿದ್ದೆ. ಕೆಲವೊಂದು ಸಲ ಕಸದ ಗುಡ್ಡೆಗಳ ಹತ್ತಿರ ಯಾರಾದರು ಗಂಡಸರು ಯೂರಿನ್ ಪಾಸ್ ಮಡೋದ್ ನೋಡಿ ಬೇಜಾರಾಗುತ್ತಿತ್ತು. ಅವರು ಬರೀ ಕೈಯಿಂದ ಕಸ ಹೇಗೆ ಪೌರ ಕಾರ್ಮಿಕರು ಎತ್ತುತಾರೆ? ಆದರೆ ನಾನು ಸರಸ್ವತಿ ಅಕ್ಕನ ಜೋತೆ ಪೌರಕಾರ್ಮಿಕರ ಸರ್ವೆ ಮಾಡೋಕೆ ಹೋದಾಗ ತಿಳಿಯಿತು. ಅವರು ನಮ್ಮ ನಾಗರಿಕರಿಂದ, ಸರ್ಕಾರದಿಂದ ಹಾಗೂ ಕೆಲಸ ಮಾಡಿಸುವ ಮೇಸ್ತ್ರಿಗಳಿಂದ ಎಷ್ಟು ತೊಂದರೆಗಳನ್ನ ಅನುಭವಿಸುತ್ತಾರೆ ಎಂದು. ನಮ್ಮ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕತ್ತೆ, ಗೂಬೆ, ನಾಯಿ ಹೆಗಣ ಅಂತ ಬೈತಾರೆ, ಆದರೆ ಇಲ್ಲಿ ಈ ಎಲ್ಲಾ ಸತ್ತ ಪ್ರಾಣಿಗಳನ್ನ ಕೊಳೆತು ನಾರುವ ಕಸದೊಂದಿಗೆ ಪೌರ ಕಾರ್ಮಿಕರು ಬರೀಗೈನಿಂದ ತೆಗೆಯಬೇಕು. ಆದ್ದರಿಂದ ಊಟ ಮಾಡಲು ಮನಸ್ಸೆ ಬರುವುದಿಲ್ಲ ಬೆರಳು ಸಂದಿಯಲ್ಲಾ ಗಾಯಗಳು ಧೂಳಿನಿಂದ ದಮ್ಮು ಕೆಮ್ಮು, ಬಗ್ಗಿ ಗುಡಿಸುವುದರಿಂದ ಕುತ್ತಿಗೆಯಿಂದ ಬೆನ್ನು ಮೂಳೆಯ ವರೆಗೆ ನೋವು, ಮನೆ ಮನೆಗೆ ಹೋಗಿ ಕಸ ಹಾಕಿಸಿ ಕೊಳ್ಳುವಾಗ ಜಾತಿಯ ಬೇದ ಬಾವದಿಂದ ಕುಡಿಯಲು ನೀರು ಕೊಡದಿರುವುದು, ಎಷ್ಟೋ ಜನ ನೀರು ಕೇಳಿದರೆ ಕಕ್ಕಸು ತೊಳೆಯುವ ಜಗ್ಗಿನಿಂದ ಕೊಡ್ತಾರೆ, ಇಲ್ಲ ಅಂದರೆ ಬಾಟಲಿ ತಂದಿದ್ದಿಯಾ ಅಂತಾರೆ. ಅವರು ಏನಾದ್ರು ಒಂದು ಅಥವಾ ಎರಡು ದಿನ ಮನೆ ಕಸ ರೋಡಿನ ಕಸ ಎತ್ತದೆ ಇದ್ದರೆ. ಏನಾಗುತ್ತೆ? ಯೋಚಿಸಿ ನೋಡಿ. ಅವರಿಗೆ ಬಂದಿರುವ ಮುಂದೆ ಬರುತ್ತಿರುವ ತೊಂದರೆಗಳು ನಮ್ಮ ನಾಗರಿಕರೆಲ್ಲರಿಗು ಬರುವುದರಲ್ಲಿ ಸಂದೇಹವೇ ಇಲ್ಲ. ಈ ಕಾರ್ಮಿಕರನ್ನು ನಮ್ಮಂತೆಯೇ ಭಾವಿಸಿಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

ಎಸ್.ಕೆ. ನೇತ್ರಾವತಿ



# ಆರೋಗ್ಯ ಭಾಗ್ಯ

- ಬೆಂಡೆಕಾಯಿ ಸೇವನೆಯಿಂದ ಮಿದುಳು ಚುರುಕಾಗುತ್ತದೆ.
- ಬೆಂಡೆಕಾಯಿಯಲ್ಲಿರುವ ಲೋಳೆ ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ.
- ಇದರ ಸೇವನೆಯಿಂದ ಅಲರ್ಜಿ, ಕಾಮಾಲೆ ದೂರವಾಗುತ್ತದೆ.
- ಬೆಂಡೆಕಾಯಿ ಸೇವನೆಯಿಂದ ಮಧುಮೇಹ ನಿಯಂತ್ರಣಕ್ಕೆ ಬರುವುದು.

ಉಷ್ಣ ಹೆಚ್ಚಾಗಿ ಕೆಮ್ಮು ಹೆಚ್ಚಾಗಿದ್ದಲ್ಲಿ

- ಎರಡು ಚಮಚ ಜೇನುತುಪ್ಪ, ಒಂದು ಚಮಚ ತುಪ್ಪ ಸ್ವಲ್ಪ ಭತ್ತದ ಅರಳನ್ನು ಸೇರಿಸಿ ಬೆಳಿಗ್ಗೆ ಹಾಗೂ ಸಂಜೆ ಸೇವಿಸಬೇಕು.
- ಜೀರಿಗೆಯನ್ನು ಹುರಿದು ಪುಡಿ ಮಾಡಿಕೊಂಡಿದ್ದು ತುಪ್ಪದೊಂದಿಗೆ ಸೇರಿಸಿ ತಿನ್ನಬೇಕು.
- ಒಣಗಿದ ಅಂಜೂರ, ಹಾಲು, ಬೆಲ್ಲ ಬೆರಸಿ ಕುಡಿಯಬೇಕು.

*ಲೇ : ವಸುಂಧರಾ ಭೂಪತಿ (ಸಂಗ್ರಹ : ಆರೋಗ್ಯ ಭಾಗ್ಯ)*

## ಶುಭಾಶಯಗಳೊಂದಿಗೆ



ಉಮ್ಮರ್ ಅಲಿ
ತಾಯಿ : ರೇಷ್ಮಾ (T.C.)
27, ಅಕ್ಟೋಬರ್



ಉಮಾಮಣಿ
ತಾಯಿ : ಸುಧಾ (ಅರವಿಂದ ಲಿಮಿಟೆಡ್)
7, ಡಿಸೆಂಬರ್



ರಿಜ್ವಾನ್
ತಾಯಿ : ಸಬಾನ (T.C.)
18, ಅಕ್ಟೋಬರ್



ಸುರೇಶ್
ತಾಯಿ : ಮಹಾದೇವಮ್ಮ (T.C.)
6, ಡಿಸೆಂಬರ್



ಶಾನ್ವಿ
ತಾಯಿ : ದಿವ್ಯ (ಯೂನಿಟೆಕ್ಸ್)
24, ಡಿಸೆಂಬರ್

## ನೆರವು

ಪ್ರತಿ ಶನಿವಾರ ಹಾಗೂ ಭಾನುವಾರಗಳಂದು, ಗಾರ್ಮೆಂಟ್ಸ್ ಕಾರ್ಮಿಕರು ಯಾವುದೇ ಕಾರ್ಮಿಕ ವಿವಾದಕ್ಕಾಗಿ, ತಮ್ಮ ಮೇಲಿನ ದೌರ್ಜನ್ಯ, ಕೌಟುಂಬಿಕ ಸಲಹೆಗಾಗಿ ತಜ್ಞ ವಕೀಲರನ್ನು ಈ ಕೆಳಕಂಡ ಸಂಸ್ಥೆಯಲ್ಲಿ ಉಚಿತವಾಗಿ ಸಂಪರ್ಕಿಸಬಹುದು.

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**
ನಂ. 216, 2ನೇ ಮಹಡಿ,
ಚೆನ್ನಕೇಶವ ನಿಲಯ, ಗಣೇಶ ದೇವಾಲಯದ ಹತ್ತಿರ, ಪಂತರಪಾಳ್ಯ, ನಾಯಂಡಹಳ್ಳಿ,
ಮೈಸೂರು ರಸ್ತೆ, ಬೆಂಗಳೂರು–560 039
**ದೂರವಾಣಿ : 080–28602325,**
**ಮೊ : 96862 29761, 990129 0495**

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

1. **ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)**
   ನಂ. 17/1, ಹೊಸ ಗುಡ್ಡದಹಳ್ಳಿ
   ಬಸ್‌ಸ್ಟಾಪ್ ಹತ್ತಿರ, ಮೈಸೂರು ರಸ್ತೆ,
   ಬೆಂಗಳೂರು – 560 026.
2. **ಕರ್ನಾಟಕ ಮಹಿಳಾ ಆಯೋಗ**
   ನಂ. 105, ಮೊದಲನೇ ಮಹಡಿ
   ಕರ್ನಾಟಕ ಗೃಹ ಮಂಡಳಿ ಕಟ್ಟಡ
   ಕಾವೇರಿಭವನ, ಕೆ.ಜಿ.ರಸ್ತೆ,
   ಬೆಂಗಳೂರು–560009
   ದೂ.: 22216485
3. **ವಿಮೋಚನಾ**
   ನಂ, 33/1–9, ತ್ಯಾಗರಾಜ ಬಡಾವಣೆ
   ಜೈಭಾರತನಗರ, ಮಾರುತಿ ಸೇವಾನಗರ
   ಬೆಂಗಳೂರು–560 038
   ದೂ.: 25492781
4. **ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ**
   ನ್ಯಾಯ ದೇಗುಲ, ಎಚ್. ಸಿದ್ಧಯ್ಯರಸ್ತೆ
   ಬೆಂಗಳೂರು–27

## ನಾಯಂಡಹಳ್ಳಿಯಲ್ಲಿ ಉಚಿತ ಲೈಬ್ರರಿ

ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಹಾಗೂ ಅವರ ಮಕ್ಕಳಿಗಾಗಿ ಗಾ.ಮ.ಕ. ಮುನ್ನಡೆಯ ನಾಯಂಡಹಳ್ಳಿ ಕಛೇರಿಯಲ್ಲಿ ಲೈಬ್ರರಿ ವ್ಯವಸ್ಥೆ ಇದ್ದು, ಆಸಕ್ತರು ಇದರ ಉಪಯೋಗವನ್ನು ಪಡೆಯಬಹುದು.
**ಸಮಯ: ಮಂಗಳವಾರದಿಂದ ಶನಿವಾರ: ಸಂಜೆ 4 ರಿಂದ 7ರ ವರೆಗೆ, ಭಾನುವಾರ: ಬೆಳಿಗ್ಗೆ 10ರಿಂದ 2ರ ವರೆಗೆ**

ಸಂಪಾದಕ ಮಂಡಳಿ–ಪ್ರಕಾಶಕರು : ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ನಂ. 216, ಎರಡನೇ ಮಹಡಿ, ಚೆನ್ನಕೇಶವ ನಿಲಯ, ಗಣೇಶ ದೇವಸ್ಥಾನದ ಹತ್ತಿರ, ಪಂತರಪಾಳ್ಯ ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು–560 039. । ಮುದ್ರಣ : ಇಳಾ ಮುದ್ರಣ, ಬೆಂಗಳೂರು – 560 026. ದೂ. : 26757159

Scanned with OKEN Scanner